# ಆರೋಹಿ ತಮಿಳು ಎಂಟ್ರಿ!

■ ಪದ್ಮನಾಭ ಭಟ್



‘ದೃಶ್ಯ’ ಸಿನಿಮಾದ ಮೂಲಕ ಚಿತ್ರರಂಗಕ್ಕೆ ಪರಿಚಯವಾದ ಹುಡುಗಿ ಆರೋಹಿ ನಾರಾಯಣ. ಅಲ್ಲಿಂದ ಅವರ ನಟನೆಯ ಆರೋಹಣ ತೀವ್ರಗತಿಯೇನೂ ಆಗಿರದಿದ್ದರೂ ಆಗಾಗ ಹಿರಿತೆರೆಯ ಮೇಲೆ ಕಾಣಿಸಿಕೊಳ್ಳುತ್ತಲೇ ಇದ್ದರು. ‘ಭೀಮಸೇನ ನಳಮಹರಾಜ’ ಸಿನಿಮಾದ ಮೂಲಕ ನಾಯಕಿಯಾಗಿಯೂ ಬಡ್ತಿ ಪಡೆದ ಅವರು ‘ದೃಶ್ಯ 2’ ಸಿನಿಮಾದಲ್ಲಿ ಮತ್ತೆ ಮಿಂಚಿದರು. ‘ಮಸ್ತ್ ಖಲಂದರ್’, ‘ಶಿವಾಜಿ ಸುರತ್ಕಲ್’ ಹೀಗೆ ಅವರು ಅಪರೂಪಕ್ಕೆ ತೆರೆಯ ಮೇಲೆ ಕಾಣಿಸಿಕೊಂಡರೂ ಭಿನ್ನ ರೂಪಗಳಲ್ಲಿ ಪ್ರೇಕ್ಷಕರ ಮನಸಲ್ಲಿ ತಮ್ಮ ಮೊಹರು ಒತ್ತುತ್ತ ಬಂದಿದ್ದಾರೆ.

ಈಗ ಕನ್ನಡದಿಂದ ತಮಿಳು ಚಿತ್ರರಂಗಕ್ಕೂ ಜಿಗಿಯಲು ಆರೋಹಿ ಸಿದ್ಧರಾಗಿದ್ದಾರೆ. ಬೇರೆ ಭಾಷೆಯ ಸಿನಿಮಾಗಳಲ್ಲಿಯೂ ನಟಿಸಬೇಕು ಎಂಬುದು ಆರೋಹಿ ಅವರಿಗೆ ಮೊದಲಿನಿಂದಲೂ ಇದ್ದ ಆಸೆ. ಅದಕ್ಕಾಗಿ ಪ್ರಯತ್ನವನ್ನೂ ಪಡುತ್ತಿದ್ದರು. ಆ ಪ್ರಯತ್ನ ಈಗ ಫಲಕೊಡುತ್ತಿದೆ.

‘ಕಳೆದ ಆರು ತಿಂಗಳಿನಿಂದ ಬ್ರೇಕ್ ತೆಗೆದುಕೊಂಡಿದ್ದೆ. ನನ್ನ ಭುಜಕ್ಕೆ ಗಾಯವಾಗಿತ್ತು. ಹಾಗಾಗಿ ಯಾವುದೇ ಆಡಿಷನ್‌ಗಾಗಲಿ ಶೂಟಿಂಗ್‌ಗಾಗಲಿ ಹೋಗಲು ಸಾಧ್ಯವಿರಲಿಲ್ಲ. ಈಗ ಪೂರ್ತಿ ಗುಣವಾಗಿದ್ದೇನೆ. ಹಾಗಾಗಿ ತಮಿಳು ಸಿನಿಮಾವನ್ನು ಒಪ್ಪಿಕೊಂಡೆ’ ಎನ್ನುವ ಅವರು ಆ ಸಿನಿಮಾ ಬಗ್ಗೆ, ತಮ್ಮ ಪಾತ್ರದ ಬಗ್ಗೆಯೂ ತುಂಬ ನಿರೀಕ್ಷೆ ಇಟ್ಟುಕೊಂಡಿದ್ದಾರೆ.

‘ಇನ್ನೂ ಹೆಸರು ಘೋಷಣೆಯಾಗಿಲ್ಲ. ಹಾಗಾಗಿ ನಾನು ಹೆಚ್ಚಿಗೆ ವಿವರಗಳನ್ನು ನೀಡುವುದು ಸಾಧ್ಯವಿಲ್ಲ. ಆದರೆ ಇದು 80ರ ದಶಕದಲ್ಲಿ ನಡೆಯುವ ಕಥೆ. ಪರ್ಫಾರ್ಮೆನ್ಸ್‌ಗೆ ಸಾಕಷ್ಟು ಸ್ಕೋಪ್ ಇದೆ. ಸಾಮಾಜಿಕ ಕಾಳಜಿಗೋಸ್ಕರ ಹೋರಾಡುವ ಹುಡುಗಿಯ ಪಾತ್ರದಲ್ಲಿ ನಾನು ಕಾಣಿಸಿಕೊಳ್ಳುತ್ತಿದ್ದೇನೆ. ನನಗೆ ಆ ಕಥೆ ಮತ್ತು ಪಾತ್ರ ಎರಡೂ ಸಖತ್ ಥ್ರಿಲ್ ಕೊಡ್ತು. ಹಾಗಾಗಿ ಒಪ್ಪಿಕೊಂಡಿದ್ದೇನೆ. ಈ ಸಿನಿಮಾದಿಂದ ನನಗೆ ತಮಿಳಿನಲ್ಲಿ ಇನ್ನಷ್ಟು ಅವಕಾಶಗಳು ಬರಲಿವೆ ಎಂಬ ನಂಬಿಕೆಯೂ ಇದೆ’ ಎಂದು ವಿಶ್ವಾಸದಿಂದ ಹೇಳುತ್ತಾರೆ ಆರೋಹಿ.

ಈ ಚಿತ್ರದ ಪಾತ್ರಕ್ಕಾಗಿ ಅವರು ಸಾಕಷ್ಟು ಸಿದ್ಧತೆಯನ್ನೂ ನಡೆಸಿದ್ದಾರೆ. ಚಿತ್ರತಂಡ ನಡೆಸುತ್ತಿರುವ ವರ್ಕ್‌ಶಾಪ್‌ಗಳಲ್ಲಿ ಭಾಗಿಯಾಗುತ್ತಿದ್ದಾರೆ. ಜೊತೆಗೆ 80ರ ದಶಕದ ಸಿನಿಮಾಗಳನ್ನು ನೋಡಿ ಅಂದಿನ ವಾತಾವರಣವನ್ನು ಅರಿತುಕೊಳ್ಳುತ್ತಿದ್ದಾರೆ.

ಕೈ ನೋವಿನಿಂದ ಮನೆಯಲ್ಲಿಯೇ ಕಳೆಯಬೇಕಾದ ಆರು ತಿಂಗಳ ಸಮಯವನ್ನು ಅವರು ವ್ಯರ್ಥವಾಗಿಸಿಲ್ಲ. ತಮ್ಮ ನಟನಾಜೀವನಕ್ಕೆ ಸಿದ್ಧತೆಯ ಸಮಯವನ್ನಾಗಿ ಬಳಸಿಕೊಂಡಿದ್ದಾರೆ.

‘ಈ ಅವಧಿಯಲ್ಲಿ ನಾನು ಸಾಕಷ್ಟು ಬೆಂಗಾಲಿ, ಮರಾಠಿ, ಇಂಗ್ಲಿಷ್ ಸಿನಿಮಾಗಳನ್ನು ನೋಡಿದೆ. ಹಾಗೆಯೇ ಒಳ್ಳೆಯ ನಿರ್ದೇಶಕರ ಮಾಸ್ಟರ್ ಕ್ಲಾಸ್‌ಗಳನ್ನು ಆನ್‌ಲೈನ್‌ನಲ್ಲಿ ನೋಡಿ ನೋಟ್ ಮಾಡಿಟ್ಟುಕೊಂಡಿದ್ದೀನಿ. ಇವೆಲ್ಲವೂ ನನ್ನ ಮುಂದಿನ ನಟನಾಜೀವನಕ್ಕೆ ಸಾಕಷ್ಟು ಸಹಾಯಕವಾಗಲಿವೆ ಎಂಬ ನಂಬಿಕೆ ಇದೆ. ಹಾಗೆಯೇ ಈ ಆರು ತಿಂಗಳನ್ನು ಖಾಲಿಯಾಗಿ ಕಳೆಯದೇ ಸಾರ್ಥಕವಾಗಿ ಬಳಸಿಕೊಂಡಿದ್ದೇನೆ ಎಂಬ ಖುಷಿಯೂ ಇದೆ’ ಎನ್ನುತ್ತಾರೆ ಅವರು.

ಇತ್ತೀಚೆಗೆ ಆರೋಹಿ ನಾರಾಯಣ ಸಾಕಷ್ಟು ಫೋಟೊಶೂಟ್‌ಗಳನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಅದರಿಂದ ಅವರಿಗೆ ಬರುತ್ತಿರುವ ಅವಕಾಶಗಳೂ ಹೆಚ್ಚಿವೆಯಂತೆ. ಈಗಾಗಲೇ ಶಿವರಾಜ್‌ಕುಮಾರ್ ಅವರ ನಟನೆಯ ಸಿನಿಮಾವೊಂದರಲ್ಲಿ ನಟಿಸಲು ಆಫರ್ ಬಂದಿದೆಯಂತೆ. ಹಾಗೆಯೇ ಇನ್ನಷ್ಟು ಕಥೆಗಳನ್ನೂ ಅವರು ಕೇಳುತ್ತಿದ್ದಾರೆ. ಕನ್ನಡದಲ್ಲಿ ಒಳ್ಳೆಯ ಅವಕಾಶಗಳನ್ನು ಒಪ್ಪಿಕೊಳ್ಳುತ್ತಲೇ ಬೇರೆ ಭಾಷೆಗಳಲ್ಲಿಯೂ ಮಿಂಚುವ ಆಸೆಯಲ್ಲಿ ಅವರು ಮುಂದಿನ ದಿನಗಳನ್ನು ಎದುರುನೋಡುತ್ತಿದ್ದಾರೆ. ■